JULY 05, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯದ ಬರ ಪರಿಸ್ಥಿತಿಯ,** ಸಮಗ್ರ ವರದಿ, ಶೀಘ್ರ ಕೇಂದ್ರಕ್ಕೆ ಸಲ್ಲಿಕೆ – ಉಪ ಮುಖ್ಯಮಂತ್ರಿ ಡಾಕ್ಟರ್ ಜಿ. ಪರಮೇಶ್ವರ.
- **ನಿಪುಣ ಭಾರತ ಮಿಷನ್;** ಸಮಗ್ರ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಯೋಜನೆಗೆ, ಐದು ವರ್ಷಗಳು ಪೂರ್ಣ.
- **ವಿಕಸಿತ ಭಾರತ,** ಜಿ ರಾಮ್ ಜಿ ಯೋಜನೆ ಪೋರ್ಟಲ್, ಕಾರ್ಯಾರಂಭ.
- **ಕಲಬುರಗಿಯ, ಶರಣಬಸವೇಶ್ವರ ವಿಶ್ವವಿದ್ಯಾಲಯದಲ್ಲಿ,** ಇಂದು, ಮಾದಕ ದ್ರವ್ಯ ವ್ಯಸನ ಮುಕ್ತಿ ಜಾಗೃತಿ ಕಾರ್ಯಾಗಾರ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಬರ ಪರಿಸ್ಥಿತಿಯ,** ಸಮಗ್ರ ವರದಿಯನ್ನು, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ, ಹಾನಿ ಪರಿಹಾರ ಬಿಡುಗಡೆಗೆ ಒತ್ತಾಯಿಸುವುದಾಗಿ, ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ ತಿಳಿಸಿದ್ದಾರೆ. ಚಿತ್ರದುರ್ಗದಲ್ಲಿ, ಬರ ಪರಿಸ್ಥಿತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಗಣಿಬಾಧಿತ ಪ್ರದೇಶ, ಪರಿಸರ ಪುನಃಶ್ಚೇತನ ಅನುದಾನದಡಿ, ಚಿತ್ರದುರ್ಗ ಜಿಲ್ಲೆಗೆ, 531 ಕೋಟಿ ರೂಪಾಯಿ ಲಭ್ಯವಿದೆ. ಸೂಕ್ತವಾಗಿ ಬಳಸಿಕೊಳ್ಳಲು ಯೋಜನೆ

ರೂಪಿಸುವಂತೆ, ಜಿಲ್ಲಾಡಳಿತಕ್ಕೆ ಉಪ ಮುಖ್ಯಮಂತ್ರಿ ಆದೇಶಿಸಿದರು. ಜಿಲ್ಲೆಯಲ್ಲಿ, 48 ಸಾವಿರದಷ್ಟು ಮೇವಿನ ಬೀಜದ ಕಿಟ್‌ಗಳಿಗೆ ಬೇಡಿಕೆ ಇದೆ. ನೀರಿನ ಲಭ್ಯತೆ ಇರುವೆಡೆ, ರೈತರಿಗೆ ಕೂಡಲೇ ಕಿಟ್ ವಿತರಿಸಬೇಕು. 201 ಮಳೆ ಮಾಪನ ಕೇಂದ್ರಗಳಿದ್ದು, 109 ಕೇಂದ್ರಗಳು ಮಾತ್ರ ಸುಸ್ಥಿತಿಯಲ್ಲಿವೆ. ಕೂಡಲೇ ಸಮರ್ಪಕ ನಿರ್ವಹಣೆ ಖಾತ್ರಿ ಪಡಿಸುವಂತೆ, ಅವರು ಸೂಚಿಸಿದರು.

<><><>

**ಧಾರವಾಡ ಜಿಲ್ಲೆಯಾದ್ಯಂತ,** ಮಳೆ ಕೊರತೆ ಹಿನ್ನೆಲೆ ಉಂಟಾದ, ಬೆಳೆ ಹಾನಿ ಬಗ್ಗೆ, ಸಮರ್ಪಕ ಮಾಹಿತಿ ಆಧರಿಸಿ, ಸಮಗ್ರ ವರದಿ ಸಲ್ಲಿಸುವಂತೆ, ಧಾರವಾಡ ಜಿಲ್ಲೆ ಪ್ರಕೃತಿ ವಿಕೋಪ ನಿರ್ವಹಣಾ ಉಸ್ತುವಾರಿ ಸಚಿವ, ಸತೀಶ ಜಾರಕಿಹೊಳಿ ಕೃಷಿ ಇಲಾಖೆ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಪ್ರಕೃತಿ ವಿಕೋಪ ನಿರ್ವಹಣೆ ಸಭೆಯಲ್ಲಿ ಅವರು, ಮಾತನಾಡಿದರು.

<><><>

**ಕೇಂದ್ರ ಸಚಿವ ಪ್ರಲ್ಹಾದ ಜೋಶಿ** ಮಾತನಾಡಿ, ದವಸ–ಧಾನ್ಯಗಳು, ಮೇವು ಹಾಗೂ ಕುಡಿಯುವ ನೀರಿನ ಸಂಗ್ರಹಕ್ಕೆ, ವಿಶೇಷ ಗಮನ ಹರಿಸಬೇಕು. ಜಿಲ್ಲೆಯ ಪ್ರತಿ ಗ್ರಾಮಕ್ಕೆ ಮಲಪ್ರಭಾ ನದಿ ನೀರು ಪೂರೈಸಲು, ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

<><><>

**ಜಿಲ್ಲಾಧಿಕಾರಿ ಆರ್.ಸ್ನೇಹಲ್,** ಸಭೆಗೆ ಮಾಹಿತಿ ನೀಡಿ, ಧಾರವಾಡ, ಹುಬ್ಬಳ್ಳಿ ಹಾಗೂ ಕಲಘಟಗಿ ತಾಲೂಕಿನ 20 ಗ್ರಾಮಗಳಲ್ಲಿ, ಕುಡಿಯುವ ನೀರಿನ ಸಮಸ್ಯೆ ಇದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ, ಎಂದರು.

<><><>

**ಹಾವೇರಿ ಜಿಲ್ಲೆಯ,** 2 ಸಾವಿರದ 182 ಕೆರೆಗಳ ಪೈಕಿ, 140 ಕೆರೆಗಳಲ್ಲಿ ನೀರಿಲ್ಲ. ಎರಡು ಕೆರೆಗಳು ಮಾತ್ರ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿದ್ದು, ಉಳಿದ ಕೆರೆಗಳಲ್ಲಿ ಭಾಗಶಃ ನೀರಿದೆ ಎಂದು, ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ. ಮುಂಬರುವ ದಿನಗಳಲ್ಲಿ, ನೀರಿನ ಕೊರತೆ ನೀಗಿಸಲು, ಮುಂಜಾಗ್ರತಾ ಕ್ರಮವಾಗಿ, ಕೆರೆ ತುಂಬಿಸಲು, ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಕುಡಿಯುವ ನೀರಿನ ಯೋಜನೆ ತುರ್ತು ಕಾಮಗಾರಿಗೆ, 4 ಕೋಟಿ ರೂಪಾಯಿ ಅನುದಾನ ಲಭಿಸಿದೆ. ಮೊದಲ ಹಂತದಲ್ಲಿ, 1 ಕೋಟಿ 50 ಲಕ್ಷ ರೂಪಾಯಿ ಮೌಲ್ಯದ, 161 ಕಾಮಗಾರಿಗಳು ಮುಕ್ತಾಯಗೊಂಡಿವೆ ಎಂದು, ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

<><><>

**ಬಾಗಲಕೋಟೆ ಜಿಲ್ಲೆಯಲ್ಲಿ,** ಒಟ್ಟು 64 ಸಾವಿರದ 471 ಹೆಕ್ಟರ್ ವಿಸ್ತೀರ್ಣದಲ್ಲಿ, ತೋಟಗಾರಿಕೆ ಬೆಳೆಗಳಿದ್ದು, ಇಲಾಖೆಯ ಅಧೀನದಲ್ಲಿ 79 ಎಕರೆ 29 ಗುಂಟೆ  ನರ್ಸರಿ ಹಾಗೂ 6 ರೈತ ಉತ್ಪಾದಕರ ಸಂಘಗಳು, ಕಾರ್ಯನಿರ್ವಹಿಸುತ್ತಿವೆ ಎಂದು, ತೋಟಗಾರಿಕೆ ಇಲಾಖೆ, ಜಂಟಿ ನಿರ್ದೇಶಕ, ರವೀಂದ್ರ ಹಕಾಟಿ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಸಿ.ಇ.ಓ., ಗಜಾನನ ಬಾಲೆ ಅಧ್ಯಕ್ಷತೆಯಲ್ಲಿ ನಡೆದ, ಸಭೆಯಲ್ಲಿ ಅವರು ಮಾಹಿತಿ ನೀಡಿದರು. ರಾಷ್ಟ್ರೀಯ ತೋಟಗಾರಿಕೆ ಮಿಷನ್, ಪ್ರಧಾನಮಂತ್ರಿ ಬೆಳೆವಿಮೆ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಚಾಯಿ ಯೋಜನೆ ಹಾಗೂ ತಾಳೆ ಎಣ್ಣೆ ಅಭಿವೃದ್ಧಿ ಯೋಜನೆ ಅಡಿ, ಅರ್ಹ ರೈತರನ್ನು ಗುರುತಿಸಿ, ನೊಂದಾಯಿಸಲಾಗುತ್ತಿದೆ, ಎಂದರು.

<><><>

**ಕೇಂದ್ರ ಶಿಕ್ಷಣ ಸಚಿವಾಲಯದ,** ಸಮಗ್ರ ಶಿಕ್ಷಣ ಅಭಿಯಾನದಡಿ ಆರಂಭಿಸಿದ, ರಾಷ್ಟ್ರೀಯ ಯೋಜನೆ, ನಿಪುಣ ಭಾರತ ಮಿಷನ್. ಈ ಯೋಜನೆ ಅನುಷ್ಠಾನಗೊಂಡು, ಇಂದಿಗೆ 5 ವರ್ಷಗಳು ಪೂರ್ಣಗೊಂಡವು. **NIPUN ಭಾರತ್ ಮಿಷನ್,** ಪ್ರತಿ ಮಗು, 3ನೇ ತರಗತಿಯ ಅಂತ್ಯದ ವೇಳೆಗೆ, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ ಸಾಧನೆ ಖಚಿತಪಡಿಸುತ್ತದೆ. 3 ರಿಂದ 9 ವರ್ಷ ವಯಸ್ಸಿನ ಮಕ್ಕಳಿಗೆ, ಜೀವಿತಾವಧಿಯ ಕಲಿಕೆಗಾಗಿ, ಮೂಲಭೂತ ಓದು, ಬರವಣಿಗೆ ಮತ್ತು ಗಣಿತ ಕೌಶಲ್ಯಗಳನ್ನು ಪಡೆಯಲು, ನಿರ್ದಿಷ್ಟ ಕಲಿಕಾ ಗುರಿಗಳನ್ನು ನಿಗದಿಪಡಿಸುತ್ತದೆ.

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ, ಧಾರವಾಡ ಜಿಲ್ಲೆಯ, ಸಹಾಯಕ ಯೋಜನಾ ಸಮನ್ವಯಾಧಿಕಾರಿ, ಡಾಕ್ಟರ್ ರೇಣುಕಾ ಅಮಲಝರಿ.

<><><>

**ಡಾಕ್ಟರ್ ರೇಣುಕಾ ಅಮಲಝರಿ ಧ್ವನಿ 75 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ವಿಕಸಿತ ಭಾರತ 2047;** ಗ್ಯಾರಂಟಿ ಫಾರ್, ರೋಜಗಾರ ಆಂಡ್ ಆಜೀವಿಕಾ ಮಿಷನ್, ಗ್ರಾಮೀಣ, ವಿ.ಬಿ ಜಿ ರಾಮ್ ಜಿ ಯೋಜನೆಯನ್ನು, ಕೇಂದ್ರ ಸರ್ಕಾರ ಜಾರಿಗೊಳಿಸಿದ್ದು, ಈ ತಿಂಗಳ 1ನೇ ತಾರೀಖಿನಿಂದ ರಾಜ್ಯಾದ್ಯಂತ, ಅನುಷ್ಠಾನಗೊಳಿಸಲಾಗಿದೆ. ವಿ.ಬಿ. ಜಿ ರಾಮ್ ಜಿ ಪೋರ್ಟಲ್ ಕಾರ್ಯಾರಂಭಿಸಿದೆ.ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಮನರೇಗಾದಡಿ, ನೋಂದಾಯಿತ ಕೂಲಿ ಕಾರ್ಮಿಕರನ್ನು ಮುಂದುವರೆಸಲಾಗಿದೆ. ಹೊಸ ಕಾರ್ಮಿಕರ ನೋಂದಣಿ ಹಾಗೂ ಜಾಬ್ ಕಾರ್ಡ್ ನೀಡುವ

ಪ್ರಕ್ರಿಯೆ ಸಹ ಪ್ರಗತಿಯಲ್ಲಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೀದರ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಗಿರೀಶ ಬದೋಲೆ.

<><><>

**ಗಿರೀಶ ಬದೋಲೆ ಧ್ವನಿ 46 ಸೆಕೆಂದುಗಳು**

<><><>

**ನಶೆ ಮುಕ್ತ ಕರ್ನಾಟಕ ಹಾಗೂ ಭಾರತ,** ಧ್ಯೇಯದೊಂದಿಗೆ, ಮಾದಕ ದ್ರವ್ಯ ವ್ಯಸನ ಮುಕ್ತಿ ಹಾಗೂ ಪೊಸ್ಕೋ ಕಾನೂನು ಜಾಗೃತಿ ಕಾರ್ಯಾಗಾರ, ಇಂದು ಬೆಳಗ್ಗೆ 9.30ಕ್ಕೆ, ಕಲಬುರಗಿಯ ಶರಣಬಸವೇಶ್ವರ ವಿಶ್ವವಿದ್ಯಾಲಯದ, ಪೂಜ್ಯ ದೊಡ್ಡಪ್ಪ ಅಪ್ಪ ಸಭಾಗೃಹದಲ್ಲಿ, ನಡೆಯಲಿದೆ. ಕಲಬುರಗಿ ಜಿಲ್ಲೆ ಪ್ರಧಾನ ನ್ಯಾಯಾಧೀಶ, ಜಿ.ಎಲ್. ಲಕ್ಷ್ಮೀನಾರಾಯಣ, ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ಕಲಬುರಗಿ ಜಿಲ್ಲಾಧಿಕಾರಿ, ಇಕ್ರಮ್ ಶರೀಫ್ ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರಿನ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ, ಸದಸ್ಯ ಕಾರ್ಯದರ್ಶಿ, ಎಚ್. ಶಶಿಧರ ಶೆಟ್ಟಿ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಸಂತೋಷಕುಮಾರ ಪಾಟೀಲ, ಅತಿಥಿಗಳಾಗಿ ಪಾಲ್ಗೊಳ್ಳುವರು. ಮಾತೋಶ್ರೀ ದಾಕ್ಷಾಯಿಣಿ ಅವರು, ಸಾನಿಧ್ಯ ವಹಿಸುವರು.

<><><>

**ಬೆಂಗಳೂರಿನ ಖಾಸಗಿ ಸಂಸ್ಥೆಯ,** ಮಕ್ಕಳ ಪಾಲನಾ ಕೇಂದ್ರದಲ್ಲಿ ನಡೆದ, ಅಮಾನವೀಯ ಘಟನೆಗೆ ಸಂಬಂಧಿಸಿ, ಇಬ್ಬರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗದ ವಶಕ್ಕೆ ನೀಡಲಾಗಿದೆ ಎಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ, ಸಂತೋಷಕುಮಾರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಕಳೆದ ಜೂನ್ 25ರ ರಾತ್ರಿ, ಮಕ್ಕಳ ಸಹಾಯವಾಣಿ 1–0–9–8ಕ್ಕೆ ಬಂದ ಕರೆ ಆಧರಿಸಿ, ಬೆಂಗಳೂರಿನ ಹೆಚ್.ಎ.ಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆಯೋಗ, ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡಿದೆ ಎಂದರು. ಘಟನೆಯ ಕುರಿತ, ವಿಸ್ತೃತ ವರದಿಗೆ, ಬೆಂಗಳೂರು ಪೂರ್ವ ಘಟಕದ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ಸೂಚಿಸಲಾಗಿದೆ.

<><><>

**ಸಂಕ್ಷಿಪ್ತ ಸುದ್ದಿಗಳು:**

<><><>

**ಸಂಸತ್ ಮುಂಗಾರು ಅಧಿವೇಶನ,** ಈ ತಿಂಗಳ 20 ರಿಂದ ಆರಂಭವಾಗಿ, ಆಗಸ್ಟ್ 13ರ ವರೆಗೆ ನಡೆಯಲಿದೆ ಎಂದು, ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಕಿರಣ್ ರಿಜಿಜು, ತಿಳಿಸಿದ್ದಾರೆ.

<><><>

**ಹುಬ್ಬಳ್ಳಿ ಧಾರವಾಡ, ಮಹಾನಗರ ಪಾಲಿಕೆಯ** 25ನೇ ಅವಧಿಗೆ, ಮಹಾಪೌರರಾಗಿ ದುರ್ಗಮ್ಮ ಶಶಿಕಾಂತ ಬಿಜವಾಡ ಹಾಗೂ ಉಪ ಮಹಾಪೌರರಾಗಿ ರತ್ನಾಬಾಯಿ ಏಕನಾಥ ನಾಝುರೆ ಆಯ್ಕೆಯಾಗಿದ್ದಾರೆ ಎಂದು, ಪ್ರಾದೇಶಿಕ ಆಯುಕ್ತರಾದ ಕೆ.ಎಂ.ಜಾನಕಿ, ತಿಳಿಸಿದ್ದಾರೆ.

<><><>

**ಬಳ್ಳಾರಿ ಜಿಲ್ಲೆಯಲ್ಲಿ, ಪ್ರಸಕ್ತ ವರ್ಷ 5 ಸಾವಿರ,** ಮುಂದಿನ ಎರಡು ವರ್ಷಗಳಲ್ಲಿ, 30 ಸಾವಿರ ಸಸಿ ನೆಡುವ ಯೋಜನೆ ರೂಪಿಸಲಾಗಿದೆ ಎಂದು, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್.ಬಸವರಾಜ, ತಿಳಿಸಿದ್ದಾರೆ.

<><><>

**ಮೈಸೂರು ಜಿಲ್ಲೆ, ಇಲವಾಲದ, ಯಲಚನಹಳ್ಳಿ** ತೋಟಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಎಸ್.ಜಿ. ಪಂಡಿತ, ಒಂದು ಮರ ನೂರಾರು ಉಸಿರು ಧ್ಯೇಯದ, ಒಂದು ಲಕ್ಷ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ರಾಜ್ಯದ ಬರ ಪರಿಸ್ಥಿತಿಯ, ಸಮಗ್ರ ವರದಿ, ಶೀಘ್ರ ಕೇಂದ್ರಕ್ಕೆ ಸಲ್ಲಿಕೆ – ಉಪ ಮುಖ್ಯಮಂತ್ರಿ ಡಾಕ್ಟರ್ ಜಿ. ಪರಮೇಶ್ವರ.
- ನಿಪುಣ ಭಾರತ ಮಿಷನ್; ಸಮಗ್ರ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಯೋಜನೆಗೆ, ಐದು ವರ್ಷಗಳು ಪೂರ್ಣ.
- ವಿಕಸಿತ ಭಾರತ, ಜಿ ರಾಮ್ ಜಿ ಯೋಜನೆ ಪೋರ್ಟಲ್, ಕಾರ್ಯಾರಂಭ.
- ಕಲಬುರಗಿಯ, ಶರಣಬಸವೇಶ್ವರ ವಿಶ್ವವಿದ್ಯಾಲಯದಲ್ಲಿ, ಇಂದು, ಮಾದಕ ದ್ರವ್ಯ ವ್ಯಸನ ಮುಕ್ತಿ ಜಾಗೃತಿ ಕಾರ್ಯಾಗಾರ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>